## 1ನೇ ಹೆಚ್ಚುವರಿ  ಸಿವಿಲ್  ದಂಡಾಧಿಕಾರಿಯವರ ನ್ಯಾಯಾಲಯ ಚನ್ನಗಿರಿ

## ಕ್ರಿಮಿನಲ್  ಮೊಕದ್ದಮೆ ಸಂಖ್ಯೆ: 3160/2025

| ಪಿರ್ಯಾದುದಾರರು : | ವಿರುದ್ಧ | ಆರೋಪಿತರು: |
|---|---|---|
| ಚನ್ನಗಿರಿ  ಪೊಲೀಸ್ ಠಾಣೆ | ಎ1. | ಕೌಶಿಕ್ ಕೆ ಎಸ್ ಬಿನ್ ಸತೀಶ<br>ವಯಸ್ಸುಃ  23 ವರ್ಷ<br>ವಾಸಃ ಕುಳೇನುರು ಗ್ರಾಮ, ಚನ್ನಗಿರಿ ತಾಃ ದಾವಣಗೆರೆ ಜಿಲ್ಲೆ |
| | ಎ 2. | ಮುನಿಸ್ವಾಮಿ ಎಸ್ ಎಂ ಬಿನ್ ಮಂಜಣ್ಣ<br>ವಯಸ್ಸುಃ  22 ವರ್ಷ<br>ವಾಸಃ ಶೆಟ್ಟಿಹಳ್ಳಿ  ಗ್ರಾಮ,  ಚನಗಿರಿ ತಾಃ<br>ದಾವಣಗೆರೆ ಜಿಲ್ಲೆ |
| | ಎ 3. | ಶ್ರೀಕಾಂತ ಎ ಆರ್ ಬಿನ್ ರಾಜಪ್ಪ ಎ ಓ<br>ವಯಸ್ಸು 33 ವರ್ಷ<br>ವಾಸಃ ಅಜ್ಜಿಹಳ್ಳಿ ಗ್ರಾಮ, ಚನ್ನಗಿರಿ ತಾಃ ದಾವಣಗೆರೆ ಜಿಲ್ಲೆ |

**<u>ದೋಷಾರೋಪಣೆ</u>**

**ಶ್ರೀಮತಿ ಮಹಾಲಕ್ಷ್ಮೀ ಜಿ, 1**ನೇ ಹೆಚ್ಚುವರಿ  ಸಿವಿಲ್.ನ್ಯಾ.ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಅಪಾಧಿಸುವುದೇನೆಂದರೆ ಆರೋಪಿತರಾದ ನೀವು:-

ಮೊದಲನೆಯದಾಗಿ 1 ರಿಂದ 3 ನೇ ಆರೋಪಿತರಾದನೀವು ಫೇಸ್ ಬುಕ್  ಮುಖಾಂತರ ಪರಿಚಯಸ್ಥರಿಗಿದ್ದು, 1 ಮತ್ತು 3 ನೇ ಅರೋತಪಿರು ಬಿ ಜಿ ಪಿ ಪಕ್ಷದಕಾರ್ಯಕರ್ತರಾಗಿದ್ದು, 2ನೇ ಆರೋಪಿ ಕಾಂಗ್ರೇಸ್ ಪಕ್ಷದ ಕಾರ್ಯಕರ್ತನಾಗಿರುತ್ತೀರ.  ದಿಃ 24-01-2022  ರಂದು 3ನೇ ಆರೋಪಿಯಾದ ನೀನು 1ನೇ ಆರೋಪಿ ಬಳಿ ಚಾಸಾ-5 ರವರು ನನಗೆ ತುಂಬಾ ತೊಂದರೆಯನ್ನು ನೀಡುತ್ತಿದ್ದಾರೆಂದು ಹೇಳಿ ಅವನಿಗೆ ಚೆನ್ನಾಗಿ ಬೈದು ಪೋಸ್ಟ್ ಮಾಡುವಂತೆ  ಹೇಳಿದ್ದರಿಂದ 1 ನೇ ಅರೋಪಿಯಾದ ನೀನು  ಚನ್ನಗಿರಿ ರಾಜಕೀಯ, ಗಿಲ್ಕಿ ಶಿವ , ಚನ್ನಗಿರಿ ನಮ್ಮದೈತಿ ಮಸಣೀಕೆರೆ ಚೌಡಮ್ಮ ಚನ್ನಗಿರಿ ರಾಯಲ್ಸ್ ಚನ್ನಗಿರಿ ಪ್ರಚಂದ ಎಂಬ ವಿವಿದ ಜಿ ಮೇಲ್ ಎಂಬ ವಿವಿಧ ಅಕೌಂಟ್ ಕ್ರಿಯೇಟ್ ಮಾಡಿ ಚಾಸಾ-1,4 ಮತ್ತು 5 ರವರಿಗೆ  ಜಾಲತಾಣದಲ್ಲಿ ಸೂಳೆ ಮಗ , ಮಿಂಡ್ರಿಮಗ

ಮಾಡಳ್ ನ ಹೆಸರು ಹಾಳುಮಾಡಿದ್ದೆ ಹಾದರಗಿತ್ತಿ ಮಗ ಎಂದು ಕೆಟ್ಟ ಅವಾಚ್ಯ ಶಬ್ದಗಳಿಂದ ಬೈದಿರುವ ಮೂಲಕ ನಿನ್ನ ವಿರುದ್ದ ಭಾ.ದಂ.ಸಂ.ಕಲಂ 504 , 509 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 2ನೇ ಆರೋಪಿಯಾದ ನೀನು 1ನೇ ಆರೋಪಿಯೊಂದಿಗೆ ಸೇರಿಕೊಂಡು ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿಯಾಗಿ ಪೋಸ್ಟ್ ಮಾಡಿದ್ದು 1ನೇ ಆರೋಪಿ ಅವಹೇಳನಕಾರಿ ಪೋಸ್ಟ್ ಮಾಡುತ್ತಿದ್ದ ವಿಷಯ ಸಹ ಗೊತ್ತಿದ್ದರು ಸಹ ಹೇಳದೆ ಆರೋಪಿಗೆ ಕುಮ್ಮಕ್ಕು ನೀಡಿದ್ದರಿಂದ ನಿನ್ನ ವಿರುದ್ದ ಭಾ.ದಂ.ಸಂ. ಕಲಂ 504, 114, 505 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ಸ್ಥಳ, ಸಮಯ, ದಿನಾಂಕದಂದು 3 ನೇ ಆರೋಪಿಯಾದ ನೀನು 1ನೇ ಆರೋಪಿಯೊಂದಿಗೆ ಸೇರಿಕೊಂಡು ಚಾಸಾ-5ರವರಿಗೆ ಅವಹೇಳನಕಾರಿಯಾಗಿ ಬೈದಾಡಿ ಪೋಸ್ಟ್ ಮಾಡುವಂತೆ ಕುಮ್ಮಕ್ಕು ನೀಡಿರುವುದರಿಂದ ಆ ಮೂಲಕ ಭಾ.ದಂ.ಸಂ.ಕಲಂ 114, 504 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತೀರಿ.

(ಮೇಲೆ ಹೇಳಿದ ಆರೋಪಗಳ ಮೇಲೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಿರುತ್ತೀರಾ ಎಂದು ನಿರ್ದೇಶಿಸಿದ್ದೇನೆ)

ದಿನಾಂಕ:05-01-2026

**(ಶ್ರೀಮತಿ ಮಹಾಲಕ್ಷ್ಮೀ ಜಿ )**
**1ನೇ ಹೆಚ್ಚುವರಿ ಪ್ರ.ದ.ನ್ಯಾ ,**
**ದಂಡಾಧಿಕಾರಿ, ಚನ್ನಗಿರಿ.**

**1ನೇ ಹೆಚ್ಚುವರಿ  ಸಿವಿಲ್  ದಂಡಾಧಿಕಾರಿಯವರ ನ್ಯಾಯಾಲಯ ಚನ್ನಗಿರಿ**

**ಕ್ರಿಮಿನಲ್  ಮೊಕದ್ದಮೆ ಸಂಖ್ಯೆ: 3160/2025**

| | | |
|---|---|---|
| ಪಿರ್ಯಾದುದಾರರು : | ವಿರುದ್ಧ | ಆರೋಪಿತರು: |
| ಚನ್ನಗಿರಿ  ಪೊಲೀಸ್ ಠಾಣೆ | ಎ .3 | ಶ್ರೀಕಾಂತ ಎ ಆರ್ ಬಿನ್ ರಾಜಪ್ಪ ಎ ಓ<br>ವಯಸ್ಸು 33 ವರ್ಷ<br>ವಾಸಃ ಅಜ್ಜಿಹಳ್ಳಿ ಗ್ರಾಮ, ಚನ್ನಗಿರಿ ತಾಃ ದಾವಣಗೆರೆ ಜಿಲ್ಲೆ |

## **ಆರೋಪಿಯ ಹೇಳಿಕೆ**

1. ಈಗ ಓದಿ ಹೇಳಿದ ನಿನ್ನ ಮೇಲಿನ ಆಪಾದೆನೆಯನ್ನು ಕೇಳಿದ್ದಿಯಾ? ತಿಳಿಯಿತೇ?

ಉತ್ತರಃ

2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆಯಾಗಬೇಕೋ?

ಉತ್ತರಃ

(ಆರೋಪಿತಳಿಗೆ ಆರೋಪಣೆಯ ಸಾರಾಂಶವನ್ನು ದಿನಾಂಕಃ 05-01-2026 ರಂದು ತೆರೆದ ನ್ಯಾಯಾಲಯದಲ್ಲಿ ಓದಿ ಕೇಳಿ ಅವನುಃಳು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಯಿತು.)

ದಿನಾಂಕ: 05-01-2026

**(ಶ್ರೀಮತಿ ಮಹಾಲಕ್ಷ್ಮೀ ಜಿ )**
**1ನೇ ಹೆಚ್ಚುವರಿ ಪ್ರ.ದ.ನ್ಯಾ ,**
**ದಂಡಾಧಿಕಾರಿ, ಚನ್ನಗಿರಿ.**